| ಕ್ರಮ ಸಂಖ್ಯೆ | ಸ್ಟಾಪ್ ನಂ. | | ನಕಲಿ ಪಡಿತರ ಚೀಟಿ | |
|---|---|---|---|---|
| 139 | 142 | 565 | 54 | 541 |
| 140 | 143 | 300 | 18 | 282 |
| 163 | 166 | 488 | 30 | 458 |
| 164 | 167 | 454 | 34 | 420 |
| 165 | 168 | 780 | 50 | 730 |
| 166 | 169 | 454 | 27 | 427 |
| 167 | 170 | 420 | 29 | 391 |

*ವಿರಾಜಪೇಟೆಯಲ್ಲಿ ಹಸಿರು ಮತ್ತುಕೇಸರಿ ಪಡಿತರ ಚೀಟಿ ವಿತರಣೆ.*

935 (066) ಶ್ರೀ ಹೆಚ್. ಬಸವರಾಜ್ (ವಿರಾಜಪೇಟೆ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಈವರೆಗೆ ವಿತರಿಸಲಾದ ಹಸಿರು ಕೇಸರಿ ಪಡಿತರ ಚೀಟಿಗಳು ಎಷ್ಟು ; ಹಾಗೂ ಈ ಪಡಿತರ ಚೀಟಿಗಳಿಗೆ ಪ್ರತಿ ತಿಂಗಳು ಪಡಿತರ ಯೋಜನೆ ಮೂಲಕ ವಿತರಿಸಲಾಗುವ ಆಹಾರ ಸಾಮಗ್ರಿಗಳು ಹಾಗೂ ಸೀಮೆಎಣ್ಣೆ ಪ್ರಮಾಣ ಎಷ್ಟು? (ಅವುಗಳಿಗೆ ಪೂರ್ಣ ವಿವರ ನೀಡುವುದು)

ಆ) ವಿರಾಜಪೇಟೆ ತಾಲ್ಲೂಕಿನಲ್ಲಿ ಹಳದಿ ಕಾರ್ಡು ಯೋಜನೆ ಅನುಷ್ಠಾನ-ಗೊಳಿಸಲಾಗಿದೆಯೇ;

ಇ) ಹಾಗಿದಿದ್ದಲ್ಲಿ ಅದಕ್ಕೆ ಕಾರಣಗಳೇನು? ಅದನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ಅ) ಹಸಿರು ಕಾರ್ಡು 28373
ಕೇಸರಿ ಕಾರ್ಡು 12524
ಒಟ್ಟು 40897

| | ಅಕ್ಕಿ | ಗೋದಿ (ಕ್ವಿಂಟಾಳುಗಳಲ್ಲಿ) |
|---|---|---|
| ಹಸಿರುಕಾರ್ಡ್ | 2270-00 | 570-00 |
| ಕೇಸರಿ ಕಾರ್ಡ್ | 890-00 | 300-00 |
| ಸಕ್ಕರೆ | 679-00 | - |
| ಸೀಮೆಎಣ್ಣೆ | 264 ಕೆ.ಎಲ್. | |

ಅ) ಹಳದಿ ಕಾರ್ಡ್ ಯೋಜನೆ ಇಲಾಖೆಯಲ್ಲಿ ಇಲ್ಲ, ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಕ್ರಮ ಮದ್ಯ ಸಾಗಾಣಿಕೆ.

936(1067) ಶ್ರೀ ಹೆಚ್.ಡಿ. ಬಸವರಾಜ್ (ವೀರಾಜಪೇಟೆ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೇರಳ ರಾಜ್ಯದಲ್ಲಿರುವ ಮಾಹೆ ಕೇಂದ್ರಾಡಳಿತ ಪ್ರದೇಶದಿಂದ ಕೊಡಗಿಗೆ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಯಲು ಕೈಗೊಂಡಿರುವ ಕ್ರಮವೇನು.

ಆ) ಈದ 3 ವರ್ಷಗಳಲ್ಲಿ, ವೀರಾಜಪೇಟೆ ತಾಲ್ಲೂಕಿನಲ್ಲಿ ಅಬಕಾರಿ ಇಲಾಖೆ ಅಕ್ರಮವಾಗಿ ಮದ್ಯ ಸಾರಾಯಿ ಮೇಮಾಟು ನಡೆಸುವವರ ವಿರುದ್ಧ ಕೈಗೊಂಡ ಕ್ರಮಗಳು(ವಿವರ ನೀಡುವುದು)

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ಬಂದಿರುವುದಿಲ್ಲ.

ಆದರೆ ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಯಲು ಮುಂಜಾಗ್ರತಾ ಕ್ರಮವಾಗಿ ವೀರಾಜಪೇಟೆ ತಾಲ್ಲೂಕಿನ ಪೆರಂಬಾಡಿ ಎಂಬಲ್ಲಿ 1998 ರಿಂದ ತನಿಖಾ ಠಾಣೆಯನ್ನು ತೆರೆಯಲಾಗಿದೆ.

ಆ) ಅಕ್ರಮ ಮದ್ಯ ವ್ಯವಹಾರ ನಡೆಸಿದ್ದರ ಮೇಲೆ ದಾಳಿಗಳನ್ನು ನಡೆಸಿ, ಅಬಕಾರಿ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ವಿವರಗಳು ಈ ರೀತಿ ಇವೆ:-